2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 36/2017</u>

| | | |
|---|---|---|
| ಸಾಕ್ಷಿದಾರರ ಹೆಸರು | - ಟಿ.ಕೆ.ಶ್ರೀನಿವಾಸ | ಪಿಡಬ್ಲೂ - 01 |
| ತಂದೆಯ ಹೆಸರು | - ಟಿ.ತಿಮ್ಮಯ್ಯ | ಸಿಡಬ್ಲೂ - 01 |
| ವಯಸ್ಸು | - 55 ವರ್ಷ | |
| ಉದ್ಯೋಗ | - ಉಪ ವಲಯ ಅರಣ್ಯಾಧಿಕಾರಿ, ಶಿವಮೊಗ್ಗ ಮೊಬೈಲ್ ಸ್ಕ್ವಾಡ್, ಶಿವಮೊಗ್ಗ | |
| ವಾಸ ಸ್ಥಳ | - ಶಿವಮೊಗ್ಗ | |

ದಿನಾಂಕಃ **12.12.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. 2015 ರಿಂದ ಸೆಪ್ಟೆಂಬರ್ 2024 ರವರೆಗೆ ನಾನು ಉಡೇವ ಶಾಖೆ ತರೀಕರೆಯಲ್ಲಿ ಉಪವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 14.12.2016 ರಂದು ನಾನು, ಚಾಸಾ.2 ಮತ್ತು ಚಾಸಾ.3 ರವರು ಸೇರಿ ಖಚಿತ ವರ್ತಮಾನದ ಮೇರೆಗೆ ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಹತ್ತಿರ ಕಾಯುತ್ತಿದ್ದೆವು. ಆ ದಿನ ಮದ್ಯಾಹ್ನ 1.00 ಗಂಟೆ ಸಮಯಕ್ಕೆ ಚಿಕ್ಕಮಗಳೂರು ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿರುವುದನ್ನು ಕಂಡು ನಾವು ನಿಲ್ಲಿಸುವ ಪ್ರಯತ್ನ ಮಾಡಿದೆವು. ಆ ದ್ವಿಚಕ್ರ ವಾಹನದಲ್ಲಿ ಒಬ್ಬ ಚಾಲಕ ಹಿಂಬದಿ ಸವಾರ ಇದ್ದು ನಮ್ಮ ಸೂಚನೆಯನ್ನು ಲೆಕ್ಕಿಸದೆ ತರೀಕೆರೆ ಹೊರಟುಹೋದರು. ಸದರಿ ದ್ವಿಚಕ್ರ ವಾಹನದ ಮದ್ಯೆ ಒಂದು ಬಿಳಿ ಬಣ್ಣದ ಚೀಲ ಕಂಡುಬಂದಿತು. ಸದರಿ ದ್ವಿಚಕ್ರ ವಾಹನದ ನಂಬರು ಕೆಎ-18/ಇಸಿ 3711 ಆಗಿತ್ತು. ನಾವು ಇಲಾಖೆಯ ಜೀಪಿನಲ್ಲಿ ಮೇಲೆ ಹೇಳಿದ ಸದರಿ ದ್ವಿಚಕ್ರ ವಾಹನವನ್ನು ಬೆನ್ನಟ್ಟಿ ತರೀಕೆರೆ ತಾಲ್ಲೂಕಿನ ಕೋಡಿಕ್ಯಾಂಪ್ ಬೋವಿ ಕಾಲೋನಿ

ನಾಲ್ಕನೇ ಕ್ರಾಸ್ ಹತ್ತಿರದ ಒಂದು ಮನೆಯ ಹತ್ತಿರ ನಾವು ಬೆನ್ನಟ್ಟಿದ್ದ ದ್ವಿಚಕ್ರವಾಹನ ನಿಂತಿತ್ತು. ನಾವು ಪರಿಶೀಲನೆಗೆ ಮುಂದಾದಾಗ ನಮ್ಮನ್ನು ನೋಡಿ ಇಬ್ಬರು ವ್ಯಕ್ತಿಗಳು ಅಲ್ಲಿಂದ ಓಡಿಹೋದರು. ನಾವು ಅವರನ್ನು ಬೆನ್ನಟ್ಟಿ ಹಿಡಿದುಕೊಂಡೆವು.

3. ಅವರನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಮಂಜು ಮತ್ತು ಮುರುಗೇಶ್ ಇಬ್ಬರು ಹಳೇಗಂಗೂರು ನಿವಾಸಿಗಳು ಎಂದು ತಿಳಿಸಿದರು. ನಾವು ದ್ವಿಚಕ್ರ ವಾಹನದಲ್ಲಿ ಬ್ಯಾಗಿನಲ್ಲಿ ಏನು ತಂದಿದ್ದೀರ ಎಂದು ಕೇಳಿದಾಗ ಅವರು ಗಂಗೂರು ಮೀಸಲು ಅರಣ್ಯದಿಂದ ಶ್ರೀಗಂಧದ ಮರ ಕಡಿದು ತುಂಡುಗಳನ್ನಾಗಿ ಮಾಡಿ 1 ಮತ್ತು 4 ನೇ ಆರೋಪಿತರಿಗೆ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು.

4. ನಾವು ಹಿಡಿದ 2 ಮತ್ತು 3 ನೇ ಆರೋಪಿತರನ್ನು 1 ಮತ್ತು 4 ನೇ ಆರೋಪಿತರ ಮನೆಯ ಬಳಿ ಕರೆತಂದು ನೋಡಿದಾಗ ಆ ಮನೆಯ ಬಾಗಿಲಿಗೆ ಬೀಗ ಹಾಕಲಾಗಿತ್ತು.

5. ವಿಚಾರಿಸಿದಾಗ ನಾವು 2 ಮತ್ತು 3 ನೇ ಆರೋಪಿತರನ್ನು ಹಿಡಿಯುವಾಗ 1 ಮತ್ತು 4 ನೇ ಆರೋಪಿತರು ಮನೆಗೆ ಬೀಗ ಹಾಕಿಕೊಂಡು ಓಡಿಹೋಗಿರುವ ವಿಚಾರ ತಿಳಿಯಿತು.

6. ನಂತರ ಈ ವಿಚಾರವನ್ನು ಚಾಸಾ.14 ರವರಿಗೆ ತಿಳಿಸಿದೆನು. ಚಾಸಾ.14 ರವರು ಚಾಸಾ.6 ರವರ ಮೂಲಕ ಶೋಧನಾ ಪತ್ರವನ್ನು ಕಳುಹಿಸಿದರು. ಚಾಸಾ.4 ರಿಂದ 9 ರವರನ್ನು ಸ್ಥಳದ ಬಂದೋಬಸ್ತಿಗಾಗಿ ಕಳುಹಿಸಿದರು. ನಾವು ಮನೆಯನ್ನು ಸುತ್ತುವರಿದು ಪರಿಶೀಲಿಸಿದಾಗ ಮನೆಯ ಹಿಂದಿನ ಬಾಗಿಲನ್ನು ಭದ್ರಪಡಿಸದೇ ಇರುವುದು ಕಂಡುಬಂತು. ನಾವು ಸದರಿ ಮನೆಯೊಳಗೆ ಪ್ರವೇಶ ಮಾಡಿ ನೋಡಿದಾಗ ಮನೆಯ ಒಂದು

ಬೆಡ್ ರೂಮಿಗೆ ಅಳವಡಿಸಿದ ಮರದ ಅಲೆಮಿರಾದಲ್ಲಿ ಬಟ್ಟೆಗಳ ಕೆಳಗಡೆ ಹಲಗೆ ಜೋಡಿಸಿರುವುದು ಕಂಡು ಬಂತು. ಪರಿಶೀಲಿಸಿದಾಗ ಒಂದು ಕಿಂಡಿ ಇದ್ದು, ಕಿಂಡಿಯಿಂದ ಶ್ರೀಗಂಧದ ಪರಿಮಳ ಬರುತ್ತಿತ್ತು. ಪುನಃ ಪರಿಶೀಲಿಸಿದಾಗ ಅಲ್ಮೆರಾದ ಪಕ್ಕದಲ್ಲಿ ದೇವರ ಕೋಣೆ ಇದ್ದುದು ಕಂಡುಬಂತು. ಪೂಜಾ ರೂಮಿನ ನೆಲದ ಗ್ರಾನೈಟ್ ಪೊಳ್ಳಾಗಿರುವುದು ಕಂಡುಬಂತು. ಅಲ್ಲ ಮತ್ತೊಮ್ಮೆ ಪರಿಶೀಲಿಸಿದಾಗ ಅಲ್ಲೊಂದು ತೊಟ್ಟಿ ಇದ್ದು, ತೊಟ್ಟಿಯಲ್ಲಿ ಶ್ರೀಗಂಧದ ತುಂಡುಗಳು ಮತ್ತು ಕೈಚೀಲಗಳು ಇರುವುದು ಕಂಡುಬಂತು.

7. ನಾವು ಚಾಸಾ.9 ರವರನ್ನು ತೊಟ್ಟಿಯೊಳಗೆ ಇಳಿಸಿ ನೋಡಲಾಗಿ ಅದರಲ್ಲಿ ಶ್ರೀಗಂಧದ ಪುಡಿ ಒಂದು ಚೀಲದಲ್ಲಿ ಇದ್ದು, ಶ್ರೀಗಂಧದ ಚಕ್ಕೆಗಳು, ಚಿಪ್ಪುಹಂದಿಯ ಚಿಪ್ಪು ಇತ್ತು. ತೊಟ್ಟಿಯ ಆಳ ಅಂದಾಜು 4 ರಿಂದ 5 ಅಡಿ ಇತ್ತು. ಶ್ರೀಗಂಧದ ಪುಡಿ, ಶ್ರೀಗಂಧದ ಚಕ್ಕೆಗಳು ಹಾಗೂ ಚಿಪ್ಪುಹಂದಿಯ ಚಿಪ್ಪುಗಳನ್ನು ಅಮಾನತು ಪಡಿಸಿಕೊಂಡೆವು.

8. ಮೇಲೆ ಹೇಳಿದ ಸ್ವತ್ತುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ಪರಿಗಣಿಸಿ ವಲಯ ಕಚೇರಿಗೆ ಕರೆ ಮಾಡಿ ಎಫ್.ಒ.ಸಿ ನಂಬರು 22/2016-17 ದಿಃ 14.12.2016 ನ್ನು ಪಡೆದುಕೊಂಡೆವು. ಈ ಬಗ್ಗೆ ಪ್ರವವರದಿ ತಯಾರಿಸಿದೆನು, ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿದೆನು.

9. ಸ್ಥಳದಲ್ಲಿ ತಯಾರಿಸಿದ ಪ್ರವವ ನ್ನು ನೋಡುತ್ತಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತಯಾರಿಸಿದ ಮಹಜರನ್ನು ಈಗ

ನೋಡುತ್ತಿದ್ದು ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

10. ಮಹಜರು ಕಾಲದಲ್ಲಿ ವಶಪಡಿಸಿಕೊಂಡು ಗಂಧದ ತುಂಡುಗಳು ಹಾಗೂ ಪುಡಿ ಸೇರಿ ಒಟ್ಟು 66 ಕೆಜಿ ಇತ್ತು. ಚಿಪ್ಪುಹಂದಿಯ ಚಿಪ್ಪುಗಳು ಒಟ್ಟು 5.600 ಗ್ರಾಂ ಇತ್ತು. ಹೊರಗಡೆ ದ್ವಿಚಕ್ರವಾಹನದಲ್ಲಿದ್ದ ಚೀಲದ ಮತ್ತು ಮನೆಯ ಒಳಗಡೆ ಇದ್ದ ಶ್ರೀಗಂಧದ ಒಟ್ಟು ತೂಕ ಮೇಲೆ ಹೇಳಿದಂತಿತ್ತು.

11. ಎರಡನೇ ಮತ್ತು ಮೂರನೇ ಆರೋಪಿತರು ಮೇಲೆ ಹೇಳಿದ ಸ್ವತ್ತುಗಳನ್ನು ತಾವೇ ತಂದು ಪೂರೈಸಿರುವುದಾಗಿ ಒಪ್ಪಿಕೊಂಡು ಗುರುತಿಸಿರುತ್ತಾರೆ. ನಾವು ಅಮಾನತುಪಡಿಸಿಕೊಂಡ ಶ್ರೀಗಂಧದ ತುಂಡುಗಳು ಹಾಗೂ ಪುಡಿ ಒಟ್ಟು ಐದು ಚೀಲಗಳಲ್ಲಿ ಇದ್ದುದನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು. ಚಿಪ್ಪುಹಂದಿಯ ಚಿಪ್ಪುಗಳು ಪ್ಲಾಸ್ಟಿಕ್ ಚೀಲದಲ್ಲಿ ಇದ್ದುದನ್ನು ಒಟ್ಟಾಗಿ ಮು.ಮಾ.2 ಎಂದು ಗುರುತಿಸಲಾಯಿತು. ಮಹಜರನ್ನು ಸಂಜೆ 4.00 ರಿಂದ ಸಂಜೆ 7.00 ರವರೆಗೆ ನಿಪಿ.2 ಪಂಚನಾಮೆ ಕ್ರಮ ಜರುಗಿಸಿದ್ದೆವು. ಸ್ಥಳೀಕರು ಪಂಚನಾಮೆ ಕಾಲದಲ್ಲಿ ಸಹಕರಿಸಿರುವುದಿಲ್ಲ.

12. ಸ್ಥಳದಲ್ಲಿ ತಯಾರಿಸಿದ ಅಮಾನತು ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಮು.ಮಾ.1 ರಲ್ಲಿನ ಗಂಧದ ತುಂಡುಗಳ ಅಳತೆಯನ್ನು ನಿಪಿ.3 ರಲ್ಲಿ ವಿವರವಾಗಿ ನಮೂದಿಸಲಾಗಿದೆ.

13. ಚಾಸಾ.3 ರವರನ್ನು ಮಹಜರು ಮಾಡುವ ಕಾಲದಲ್ಲಿ ವಿಡಿಯೋ ಚಿತ್ರೀಕರಣ ಮಾಡಿ ಭಾವಚಿತ್ರ ಸಂಗ್ರಹಿಸಿದ್ದಾರೆ.

ಸದರಿ ವಿಡಿಯೋ ಇರುವ ಸಿಡಿ ಮತ್ತು ಡಿವಿಡಿಯನ್ನು ಈಗ ನೋಡುತ್ತಿದ್ದು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಮನೆಯಲ್ಲಿ ಸಂಗ್ರಹಿಸಿದ ಭಾವಚಿತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ.6 ರಿಂದ 8 ಎಂದು ಗುರುತಿಸಲಾಯಿತು.

14. 2 ಮತ್ತು 3 ನೇ ಆರೋಪಿತರು ಹಾಗೂ ವಶಪಡಿಸಿಕೊಂಡ ಮುದ್ದೆಮಾಲುಗಳೊಂದಿಗೆ ತರೀಕೆರೆ ವಲಯ ಕಚೇರಿಗೆ ಹಾಜರಾಗಿ ಚಾಸಾ.14 ರವರ ಮುಂದೆ ಹಾಜರುಪಡಿಸಿದೆವು. ಸಾಕ್ಷಿಯು 1, 3 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

15. ದಿಃ 10.01.2017 ರಂದು 2 ಮತ್ತು 3 ನೇ ಆರೋಪಿತರನ್ನು ಚಾಸಾ.14 ರವರು ನ್ಯಾಯಾಲಯದ ಅನುಮತಿ ಪಡೆದು ವಶಕ್ಕೆ ಪಡೆದುಕೊಂಡರು. ನಾನು, ಚಾಸಾ.2, 3, 14 ಹಾಗೂ 2 ಮತ್ತು 3 ನೇ ಆರೋಪಿತರು ಸೇರಿ, ಆರೋಪಿತರು ತೋರಿಸಿದ ಶಾಂತವೇರಿ ಗ್ರಾಮದ ಈಚಲು ಕಟ್ಟೆಯ ಬಲಭಾಗದ ಗಂಗೂರು ಮೀಸಲು ಅರಣ್ಯಕ್ಕೆ ಹೋದೆವು. ಅಲ್ಲಿ ಮೂರು ಶ್ರೀಗಂಧದ ಮರಕಡಿದ ನಿಶಾನೆಗಳನ್ನು 2 ಮತ್ತು 3 ನೇ ಆರೋಪಿತರು ತೋರಿಸಿದರು. ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿದೆವು. ಸ್ಥಳದಲ್ಲಿ ಸುಮಾರು ಅರ್ಧ ಪುಟದಷ್ಟು ಕಡಿದ ಮರದ ಬುಡ ಇರುವುದು ಕಂಡುಬಂತು.

16. ಸ್ಥಳಲ್ಲಿ ಮಹಜರನ್ನು ಮದ್ಯಾಹ್ನ 2.30 ರಿಂದ 3.30 ರವರೆಗೆ ಮಾಡಿದೆವು. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಸದರಿ ಮರವನ್ನು ಗರಗಸ ಮತ್ತು

ಕತ್ತಿಯಿಂದ ಕತ್ತರಿಸಿರುವುದಾಗಿ 2 ಮತ್ತು 3 ನೇ ಆರೋಪಿತರು ತಿಳಿಸಿದರು. ಶ್ರೀಗಂಧದ ಕಡಿದ ಮರದ ಬುಡ ಇರುವ ಸ್ಥಳದಿಂದ ಸುಮಾರು 50 ಮೀಟರ್ ದೂರದಲ್ಲಿ ಪೊದೆಯಲ್ಲಿ ಬಚ್ಚಿಟ್ಟಿದ್ದ ಕತ್ತಿ ಮತ್ತು ಗರಗಸವನ್ನು ಆರೋಪಿತರು ತೋರಿಸಿದ ಹಾಜರುಪಡಿಸಿದಂತೆ ಅಮಾನತುಪಡಿಸಿಕೊಂಡೆವು. ಅವುಗಳ ಮೇಲೆ ಎಫ್.ಒ.ಸಿ. ನಂಬರು ನಮೂದಿಸಿದೆವು. ಸದರಿ ಕತ್ತಿ ಹಾಗೂ ಗರಗಸವನ್ನು ಕ್ರಮವಾಗಿ ಮು.ಮಾ.3 ಮತ್ತು 4 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಚಾಸಾ.3 ರವರು ತನ್ನ ಮೊಬೈಲಿನಲ್ಲಿ ಸಂಗ್ರಹಿಸಿದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.10 ಎಂದು ಗುರುತಿಸಲಾಯಿತು.

17. ಈ ಬಗ್ಗೆ ಸ್ಥಳದಲ್ಲಿ ಅಮಾನತು ವರದಿ ತಯಾರಿಸಿದ್ದು ಅದನ್ನು ಈಗ ನಿಪಿ.11 ಎಂದು ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. 2 ಮತ್ತು 3 ನೇ ಆರೋಪಿತರನ್ನು ವಾಪಾಸ್ಸು ಕಚೇರಿಗೆ ಕರೆತಂದೆವು.

18. ಈ ಬಗ್ಗೆ ದಿಃ 10.01.2017 ರಂದು ತನಿಖಾಧಿಕಾರಿಗಳಲ್ಲಿ ಹೇಳಿಕೆ ನೀಡಿದ್ದೇನೆ.

<u>ಪಾಟೀಸವಾಲು: ಶ್ರೀ ಬಿ.ಟಿ.ಡಿ., ವಕೀಲರಿಂದ ಆರೋಪಿತರ ಪರವಾಗಿ</u>

(ಆರೋಪಿತರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ